# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ–577451, ಶಿವಮೊಗ್ಗ, ಕರ್ನಾಟಕ.

Phone No: 08282–256166, mob: 7022254993 ಇ–ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in



ccredited by NAAC with 'A' Grade, Ranked 73rd Place in NIRF– 2019 and Secured 45th Place in SCIMAGO Institutional Rankings


ಸಂಖ್ಯೆ: ಕುವಿ/ಪವಿ/ಪಿಜಿ/221/2021–22 ದಿನಾಂಕ: 08–04–2021.

## ಅಧಿಸೂಚನೆ

**ವಿಷಯ:** ಸ್ನಾತಕೋತ್ತರ ರೆಗ್ಯುಲರ್ /ಸ್ನಾತಕೋತ್ತರ ಡಿಪ್ಲೋಮ ಪದವಿ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪದ್ಧತಿಯಲ್ಲಿ ಮಾರ್ಪಾಡು ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ–19:ಯುಎಸ್‌ವಿ:2010: ದಿ:23–08–2010.
2. ಕುವಿ:ಯುಎಟಿ–3:2963:2010–11. ದಿ: 02–09–2010.
3. ದಿನಾಂಕ: 29–01–2019ರಂದು ನಡೆದ ವಿದ್ಯಾ ವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಿರ್ಣಯ.
4. ದಿನಾಂಕ: 30–03–2021ರಂದು ನಡೆದ ವಿದ್ಯಾ ವಿಷಯಕ ಪರಿಷತ್ತಿನ ಸಭೆಯ ನಿರ್ಣಯ.
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08–04–2021.

***

ದಿನಾಂಕ:29–01–2019 ರಂದು ನಡೆದ ವಿದ್ಯಾ ವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಿರ್ಣಯದನ್ವಯ, 2019–20ನೇ ಸಾಲಿನಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ರೆಗ್ಯುಲರ್ / ಸ್ನಾತಕೋತ್ತರ ಡಿಪ್ಲೋಮ ಪದವಿ ಪರೀಕ್ಷೆಗಳಲ್ಲಿ ಏಕ ಮೌಲ್ಯಮಾಪನ ಪದ್ಧತಿಯನ್ನು ಅಳವಡಿಸಲಾಗಿತ್ತು.

ದಿನಾಂಕ: 30–03–2021ರ ವಿದ್ಯಾವಿಷಯಕ ಪರಿಷತ್ ಸಭೆಯು ಸ್ನಾತಕೋತ್ತರ ರೆಗ್ಯುಲರ್ / ಸ್ನಾತಕೋತ್ತರ ಡಿಪ್ಲೋಮ ಪದವಿ ಪರೀಕ್ಷೆಗಳಲ್ಲಿ ಈ ಹಿಂದಿನ ವಿನಿಯಮಗಳಂತೆ ದ್ವಿ–ಮೌಲ್ಯಮಾಪನ ಪದ್ಧತಿಯನ್ನು 2020–21ನೇ ಶೈಕ್ಷಣಿಕ ಸಾಲಿನ ಪರೀಕ್ಷೆಗಳಿಂದ ಅನ್ವಯವಾಗುವಂತೆ ಅಳವಡಿಸಲು ನಿರ್ಣಯಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾರ್ಚ್/ಏಪ್ರಿಲ್ – 2021ರ ಸ್ನಾತಕೋತ್ತರ ರೆಗ್ಯುಲರ್ / ಸ್ನಾತಕೋತ್ತರ ಡಿಪ್ಲೋಮ ಪದವಿ ಪರೀಕ್ಷೆಗಳಿಂದ ಅನ್ವಯವಾಗುವಂತೆ ದ್ವಿ–ಮೌಲ್ಯಮಾಪನ ಪದ್ಧತಿಯನ್ನು ವಿಶ್ವವಿದ್ಯಾಲಯದ ಅನುಮೋದಿತ ಸಿ.ಬಿ.ಸಿ.ಎಸ್. ವಿನಿಯಮಗಳಂತೆಯೇ ಪುನಃ ಅಳವಡಿಸಲಾಗಿದೆ.

**ದ್ವಿ–ಮೌಲ್ಯಮಾಪನ ಪದ್ಧತಿಯ ಅಳವಡಿಕೆಯಿಂದಾಗಿ ಅನುಮೋದಿತ ವಿನಿಯಮಗಳಂತೆ:**

1. ಎರಡು ಮೌಲ್ಯಮಾಪನಗಳಲ್ಲಿ ಪಡೆದ ಅಂಕಗಳ ವ್ಯತ್ಯಾಸ ಶೇ. 20ಕ್ಕಿಂತ ಹೆಚ್ಚಿದ್ದಲ್ಲಿ ಬಾಹ್ಯ ಪರೀಕ್ಷರಿಂದ ಮೂರನೇ ಮೌಲ್ಯಮಾಪನ ಕೈಗೊಳ್ಳುವುದು. ಹಾಗೂ ಯಾವ ಎರಡು ಮೌಲ್ಯಮಾಪನ ಅಂಕಗಳ ಅಂತರ ಕಡಿಮೆ ಇದೆಯೋ ಅವುಗಳ (ಸಮೀಪ ಇರುವ ಎರಡು ಅಂಕಗಳ) ಸರಾಸರಿ ಅಂಕವನ್ನು ಫಲಿತಾಂಶಕ್ಕೆ ಪರಿಗಣಿಸುವುದು.
2. ಸವಾಲಿನ ಮೌಲ್ಯಮಾಪನವನ್ನು ಪುನಃ ಜಾರಿಗೊಳಿಸಲಾಗಿದೆ.
3. ಮರು ಎಣಿಕೆ (Retotalling), ಉತ್ತರ ಪತ್ರಿಕೆಗಳ ಛಾಯಾಪ್ರತಿ (Xerox) ಪಡೆಯುವಿಕೆ ಮತ್ತು ಮರು ಮೌಲ್ಯಮಾಪನ (Revaluation) ಪ್ರಕ್ರಿಯೆಗಳನ್ನು ರದ್ದುಪಡಿಸಲಾಗಿದೆ.

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವರು (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ.